**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಗಳವರ ನ್ಯಾಯಾಲಯ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**

**ಎಂ.ವಿ.ಸಿ.ನಂ. 163/2019**

ಆರ್ ಡಬ್ಲ್ಯು-: 1

ಸಾಕ್ಷಿಯ ಹೆಸರು : ಸುರೇಶ
ತಂದೆಯ ಹೆಸರು : ಶ್ರೀಧರಾಚಾರ್ಯ
ವಯಸ್ಸು : 34 ವರ್ಷ
ಉದ್ಯೋಗ : ವ್ಯಾಪಾರ
ವಾಸ : ಕುವೆಟ್ಟು ಗ್ರಾಮ

ದಿನಾಂಕ 13-04-2023 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಲಾಯಿತು.

ಮುಖ್ಯ ವಿಚಾರಣೆ: 1ನೇ ಎದುರುದಾರರ ಪರ: ಶ್ರೀ ಬಿ ಆರ್ ಹೆಚ್ ವಕೀಲರಿಂದ:

ನಾನು ಈ ಅರ್ಜಿಯಲ್ಲಿ ಮೊದಲನೇ ಎದುರುದಾರ ಇರುತ್ತೇನೆ. ನನ್ನ ಮುಖ್ಯ ವಿಚಾರಣೆ ಹೇಳಿಕೆ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯವೆಲ್ಲಾ ಸತ್ಯವಾಗಿರುತ್ತದೆ. ಅದನ್ನು ಓದಿ ನೋಡಿ ಸಹಿ ಮಾಡಿರುತ್ತೇನೆ. ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ, ಅವುಗಳನ್ನು ಗುರುತಿಸಬೇಕಾಗಿ ಕೋರಿಕೊಳ್ಳುತ್ತೇನೆ.

ನೋಟರೀಕೃತ ಆರ್ ಸಿ ಮತ್ತು ಆಧಾರ್ ಕಾರ್ಡನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಆರ್-1 ಮತ್ತು 2 ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಅರ್ಜಿದಾರರ ಪರ: ಶ್ರೀ ಕೆಜಿಪಿ ವಕೀಲರಿಂದ:

ಅರ್ಜಿದಾರರು 2ನೇ ಎದುರುದಾರರು ಚಾಲನೆ ಮಾಡುತ್ತಿದ್ದ ಕಾರಿನಲ್ಲಿ ಪ್ರಯಾಣಿಕರಾಗಿ ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ಅಪಘಾತವು ಕೆಎ-03 ಎಸಿ-6268 ಮತ್ತು ಕೆಎ-09 ಎಂ-6548 ರ ಎರಡು ಕಾರುಗಳು ನಡುವೆ ಆಗಿದೆ ಎಂದರೆ ನಿಜ. ಅಪಘಾತವಾದ ದಿನ ನನ್ನ ಕಾರನ್ನು ಆಶೀಶ್ ಎಂಬುವವರು ಚಾಲನೆ ಮಾಡುತ್ತಿದ್ದರು ಎಂದರೆ ನಿಜ. ಟಾಟಾ ಇಂಡಿಕಾ ಕಾರನ್ನು 2 ನೇ ಎದುರುದಾರರು ಚಾಲನೆ ಮಾಡುತ್ತಿದ್ದರು ಎಂದರೆ ನಿಜ. ಅಪಘಾತವಾದ ನಂತರ ಅರ್ಜಿದಾರರಿಗೆ ಪ್ರಜ್ಞೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತವು ಎರಡು ಕಾರಿನ ಚಾಲಕರ ತಪ್ಪಿನಿಂದಲೂ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2 ನೇ ಎದುರುದಾರರ ತಪ್ಪಿನಿಂದ ಆಗಿದೆ, ಆಶೀಶ್ ರವರ ತಪ್ಪಿನಿಂದ ಆಗಿಲ್ಲ ಎಂದು ನುಡಿದಿರುತ್ತಾರೆ.

ಎರಡು ಕಾರಿನ ಚಾಲಕರ ತಪ್ಪಿನಿಂದ ಅಪಘಾತವಾಗಿರುವುದರಿಂದ ಎರಡು ಕಾರುಗಳ ಮಾಲೀಕರು ಪರಿಹಾರ ನೀಡಲು ಬಾದ್ಯಸ್ಥರು ಎಂದರೆ ಸರಿಯಲ್ಲ. ನನ್ನ ಕಾರಿನ ಚಾಲಕನ ತಪ್ಪಿನಿಂದಲೂ ಅಪಘಾತವಾಗಿದ್ದರೂ ಪರಿಹಾರ ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದು ನಾನು ಯಾವುದೇ ಕಾನೂನಿನ ಕ್ರಮ ಕೈಗೊಂಡಿಲ್ಲ ಎಂದರೆ ನಿಜ. ಅರ್ಜಿದಾರರಿಗೆ ಪರಿಹಾರ ಕೊಡಲು ನಾನು ಬಾದ್ಯಸ್ಥ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 3ನೇ ಎದುರುದಾರರ ಪರಃ ಶ್ರೀ ಹೆಚ್ ಟಿ ಆರ್ ವಕೀಲರಿಂದಃ</u>

ಅಪಘಾತವಾದ ದಿನ ಕಾರನ್ನು ಆಶೀಶ್ ಯಾನೇ ವಿನಾಯಕ ಎಂಬುವವರು ಚಾಲನೆ ಮಾಡುತ್ತಿದ್ದರು. ಪೋಲೀಸರು ತನಿಖೆ ಮಾಡಿ ಆಶೀಶ್ ರವರ ವಿರುದ್ದ ದೋಷಾರೋಪಣಾ ಪತ್ರ ಸಲ್ಲಿಸಿದ್ದಾರೆ ಎಂದರೆ ನಿಜ. ನನ್ನ ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿರುವುದರಿಂದ

ಅರ್ಜಿದಾರರಿಗೆ ಪರಿಹಾರವನ್ನು ನೀಡಲು ನಾನೇ ಬಾದ್ಯಸ್ಥ ಎಂದರೆ ಸರಿಯಲ್ಲ. ಅರ್ಜಿದಾರರು ಹೋಗುತ್ತಿದ್ದ ವಾಹನವನ್ನು 2 ನೇ ಎದುರುದಾರರು ಚಾಲನೆ ಮಾಡುತ್ತಿದ್ದರು ಎಂದರೆ ನಿಜ. ಅಪಘಾತದ ಸಂಬಂದ 2 ನೇ ಎದುರುದಾರರ ವಿರುದ್ದ ಪೊಲೀಸರು ಯಾವುದೇ ಕೇಸನ್ನು ದಾಖಲು ಮಾಡಿಲ್ಲ ಎಂದರೆ ನಿಜ. 2 ನೇ ಎದುರುದಾರರ ತಪ್ಪಿನಿಂದ ಅಪಘಾತವಾಗಿಲ್ಲದ ಕಾರಣ ಕೆಎ-03 ಎಸಿ-6268 ರ ಮಾಲೀಕರಾದ 3 ನೇ ಎದುರುದಾರರು ಅರ್ಜಿದಾರರಿಗೆ ಪರಿಹಾರ ಕೊಡಲು ಬಾದ್ಯರಲ್ಲ, ನಾನೇ ಬಾದ್ಯಸ್ಥ ಎಂದರೆ ಸರಿಯಲ್ಲ. ನನ್ನ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವ ಸಲುವಾಗಿ 2 ನೇ ಎದುರುದಾರರ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 4 ನೇ ಎದುರುದಾರರ ಪರಃ ಶ್ರೀ ಸಿಜೆಎಂ ವಕೀಲರಿಂದಃ</u>

ಅಪಘಾತವಾದ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ನಿಜ. ನಾನು ಅಪಘಾತಕ್ಕೊಳಗಾದ ಕೆಎ-09 ಎಂ-6548 ರ ಕಾರಿನ ಮಾಲೀಕ ಎಂದರೆ ನಿಜ. ಅಪಘಾತವಾದ ದಿನ ಕಾರನ್ನು ಆಶೀಶ್ ಯಾನೇ ವಿನಾಯಕ ಎಂಬುವವರು ಚಾಲನೆ ಮಾಡುತ್ತಿದ್ದರು. ಅವರು ಅಪಘಾತದಲ್ಲಿ ಸ್ಥಳದಲ್ಲೇ ಮರಣ ಹೊಂದಿರುತ್ತಾರೆ ಎಂದರೆ ನಿಜ. ಆಶೀಶ್ ನಮ್ಮ ಊರಿನವರು, ಅವರು ನನ್ನ ಸ್ನೇಹಿತನ ತಮ್ಮನಾಗಬೇಕು. ಕಾರನ್ನು ಚಾಲನೆ ಮಾಡಲು ಅವರಿಗೆ ಚಾಲನಾ ಪರವಾನಿಗಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಕಾರನ್ನು ಅವರಿಗೆ ಚಾಲನೆ ಮಾಡಲು ಕೊಟ್ಟ ಸಮಯದಲ್ಲಿ ಅವರ ಚಾಲನಾ ಪರವಾನಿಗಿಯನ್ನು ಪಡೆದುಕೊಂಡಿಲ್ಲ ಎಂದರೆ ನಿಜ. ಅಪಘಾತವಾದ ದಿನ ಅವರಿಗೆ ಚಾಲನಾ ಪರವಾನಿಗಿ ಇಲ್ಲದೆ ಇರುವ ವಿಚಾರ ನನಗೆ ಗೊತ್ತಿದ್ದರೂ ಸಹ ಚಾಲನಾ ಪರವಾನಿಗಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ಸಂಬಂದ ಪೋಲೀಸರು ನನ್ನನ್ನು ತನಿಖೆ ಮಾಡಿದ್ದರು ಎಂದರೆ ನಿಜ. ಆ ಸಮಯದಲ್ಲಿ ವಿಮಾ ಪಾಲಿಸಿ ಮತ್ತು ಚಾಲನಾ

ಪರವಾನಿಗಿಯನ್ನು ಕೊಡುವಂತೆ ಕೇಳಿದ್ದರು ಎಂದರೆ ನಿಜ. ನಾನು ಯಾವುದೇ ದಾಖಲಾತಿಗಳನ್ನು ಪೋಲೀಸರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಆಶೀಶ್ ಇವರ ಚಾಲನಾ ಪರವಾನಿಗಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನಿಜ. ನನ್ನ ಕಾರಿಗೆ ಸಂಬಂದಪಟ್ಟ ವಿಮಾ ಪಾಲಿಸಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನಿಜ.

ಪೋಲೀಸರು ಆಶೀಶ್ ರವರ ತಪ್ಪಿನಿಂದ ಅಪಘಾತವಾಗಿದೆ ನಿಪಿ-2 ರಂತೆ ಪ್ರವವ ಮತ್ತು ನಿಪಿ-7 ರಂತೆ ದೋಷಾರೋಪಣಾ ಪತ್ರ ಸಲ್ಲಿಸಿದ್ದಾರೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಅವರ ತಪ್ಪಿನಿಂದ ಅಪಘಾತವಾಗಿಲ್ಲ ಎಂದು ನುಡಿದಿರುತ್ತಾರೆ. ಪೋಲೀಸರು ತನಿಖೆ ಮಾಡಿ ಸಲ್ಲಿಸಿರುವ ದೋಷಾರೋಪಣಾ ಪತ್ರದ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ನಿಪಿ-2 ರ ಪ್ರವವ ಮತ್ತು ನಿಪಿ-7 ರ ದೋಷಾರೋಪಣಾ ಪತ್ರ ಸರಿ ಇಲ್ಲವೆಂದು ನಾನು ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನಿಸಿರುವುದಿಲ್ಲ. ಪೋಲೀಸರು ಆಶೀಶ್ ರವರ ತಪ್ಪಿನಿಂದಲೇ ಅಪಘಾತವಾಗಿದೆ ಎಂದು ಅಬೇಟೆಡ್ ಚಾರ್ಜ್ ಶೀಟ್ ಸಲ್ಲಿಸಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಅವರ ತಪ್ಪಿನಿಂದ ಅಪಘಾತವಾಗಿಲ್ಲ ಎಂದು ನುಡಿದಿರುತ್ತಾರೆ.

ಪೋಲೀಸರು ತನಿಖೆ ಮಾಡಿ 3 ನೇ ಎದುರುದಾರರ ವಾಹನವಾದ ಕೆಎ-03 ಎಸಿ-6268 ರ ಚಾಲಕನಾದ 2 ನೇ ಎದುರುದಾರರ ವಿರುದ್ದ ಯಾವುದೇ ದೋಷಾರೋಪಣಾ ಪತ್ರ ಸಲ್ಲಿಸಿಲ್ಲ ಎಂದರೆ ನಿಜ. ನನ್ನ ತಕರಾರು ಮತ್ತು ಮುಖ್ಯ ವಿಚಾರಣಾ ಪತ್ರದಲ್ಲಿ ಎರಡು ವಾಹನಗಳ ಚಾಲಕರ ತಪ್ಪಿನಿಂದ ಅಪಘಾತವಾಗಿದೆ ಎಂದು ಬಾದ್ಯತೆ ತಪ್ಪಿಸಿಕೊಳ್ಳುವ ಸಲುವಾಗಿ ಹೇಳಿದ್ದೇನೆ ಎಂದರೆ ಸರಿಯಲ್ಲ. 2 ನೇ ಎದುರುದಾರರ ತಪ್ಪಿನಿಂದಲೂ ಅಪಘಾತವಾಗಿದೆ ಎಂದು ನಾನು ಅವರ ವಿರುದ್ದ ಪೋಲೀಸರಿಗೆ ದೂರು ನೀಡಿಲ್ಲ ಎಂದರೆ ನಿಜ. ನನ್ನ ಬಾದ್ಯತೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆಶೀಶ್ ರವರಿಗೆ ಚಾಲನಾ ಪರವಾನಿಗಿ ಇಲ್ಲದ ವಿಚಾರ ನನಗೆ ಗೊತ್ತಿದ್ದರೂ ಸಹ ಅವರಿಗೆ ವಾಹನ ಚಾಲನೆ ಮಾಡಲು ಕಾನೂನು ಬಾಹಿರವಾಗಿ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ವಿಮೆ ಚಾಲ್ತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪರಿಹಾರ ಕೊಡಲು 4ನೇ ಎದುರುದಾರರು ಬಾಧ್ಯರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.